ದಿನಾಂಕಃ 23-01-2026 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನ್ಯಾಯಾಲಯದ ಮುಂದಿರುವ ಒಂದು ಚಾಕು, ಒಂದು ಕೌದಿ, ಮೃತನ ಮೈಮೇಲೆ ನೀಲಿ ಜಿನ್ಸ ಪ್ಯಾಂಟ್, ಚೆಕ್ಸ ನೀಲಿ ಶರ್ಟು, ಒಂದು ಟವೆಲ್ ನೋಡಿ ಗುರುತಿಸಿದ್ದೇನೆ. ಒಂದು ಚಾಕುವನ್ನು ಮುಮಾ-1, ಒಂದು ಕೌದಿಯನ್ನು ಮುಮಾ-2, ಮೃತನ ಮೈಮೇಲಿನ ನೀಲಿ ಜಿನ್ಸ ಪ್ಯಾಂಟ್ ಮುಮಾ-3 ಹಾಗೂ ಚೆಕ್ಸ ನೀಲಿ ಶರ್ಟು ಮುಮಾ-4 ಅಂತಾ, ಒಂದು ಟವೆಲನ್ನು ಮುಮಾ-5 ಅಂತಾ ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ. ಪಿ.ಹೆಚ್.ಎಮ್ ವಕೀಲರಿಂದ.**

ಆರೋಪಿ ನನ್ನ ಸ್ವತಃ ಚಿಕ್ಕಪ್ಪನ ಮಗನಲ್ಲ, ಆರೋಪಿಯ ತಂದೆಯ ಅಪ್ಪ ಹಾಗೂ ನನ್ನ ತಂದೆಯ ಅಪ್ಪ ಖಾಸ ಅಣ್ಣ-ತಮ್ಮಂದಿರು. ಆರೋಪಿತರು 3 ಜನ ಅಣ್ಣ-ತಮ್ಮಂದಿರು. 3 ಜನ ಅಣ್ಣ-ತಮ್ಮಂದಿರು ಹಾಗೂ ಆರೋಪಿತನ ತಂದೆ-ತಾಯಿ ಮಂಗಳೂರಿಗೆ ದುಡಿಯಲು ಹೋಗಿದ್ದಾರೆ ಎನ್ನುವುದು ಸರಿಯಲ್ಲ. ತಂದೆ-ತಾಯಿ ಊರಲ್ಲಿಯೇ ಇರುತ್ತಾರೆ. ಆರೋಪಿ 8-10 ವರ್ಷಗಳ ಹಿಂದೆ ಮಂಗಳೂರಿನಲ್ಲಿ ದುಡಿಯುತ್ತಿದ್ದ ಹಾಗೂ ಮದುವೆ ನಂತರವೂ ಸಹ ಹೆಂಡತಿಯೊಂದಿಗೆ ಮಂಗಳೂರಿನಲ್ಲಿದ್ದ. ಎರಡೂವರೆ ವರ್ಷಗಳ ಹಿಂದೆ ಆರೋಪಿಯ ಹೆಂಡತಿ ಊರಿಗೆ ಬಂದಿದ್ದಳು ಆಗ ಆರೋಪಿ ಹಾಗೂ ಆತನ ಹೆಂಡತಿ ಜಗಳ ಮಾಡಿಕೊಂಡಿದ್ದರು. ನಾನು ಹಾಗೂ ಆರೋಪಿಯ ಅಣ್ಣ-ತಮ್ಮಂದಿರು ಸೇರಿ ಜಗಳ ಬಿಡಿಸಿದ್ದೆವು, ನಾನೂ ಸಹ ಆಕೆಯವನ್ನು ಆತನ ಅಣ್ಣತಮ್ಮಂದಿರೊಂದಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ.

ಆರೋಪಿಯ ಹೆಂಡತಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಆರೋಪಿ ಹುಚ್ಚನಿದ್ದಾನೆ ಅವನನ್ನು ಕಟ್ಟಿ ಹಾಕಿ ಎಂದು ಆರೋಪಿ ಹೆಂಡತಿ ಮನೆಗೆ ಪೋನ್ ಮಾಡಿ ತಿಳಿಸಿದ್ದೆ ಎನ್ನುವುದು ಸರಿಯಲ್ಲ. ಕೇವಲ ಆಸ್ಪತ್ರೆಗೆ ಬರಲು ತಿಳಿಸಿದ್ದೆ. ಅವರು ಆಸ್ಪತ್ರೆಗೆ ಬಂದಾಗ ನಾನು ಅವರೊಂದಿಗೆ ಏನೂ ಮಾತನಾಡಿಲ್ಲ. ನಾನು ಆರೋಪಿಗೆ ಹಲ್ಲೆ ಮಾಡಿಲ್ಲ ಹಾಗೂ ಬೈದಿಲ್ಲ.

ಆರೋಪಿ ದುಡಿಯುವಾಗ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡು ಹುಚ್ಚನಾಗಿರುವುದರಿಂದ ಅವನ ತಂದೆ ದುಡಿಯಲು ಮಂಗಳೂರಿಗೆ ಕಳುಹಿಸಿಲ್ಲ ಎನ್ನುವುದು ನನಗೆ ಗೊತ್ತಿಲ್ಲ. ಆರೋಪಿ ಧಾರವಾಡ ಮಾನಸಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಎನ್ನುವುದು ನಿಜ. ಹಾಗಾಗಿ ಆರೋಪಿಯ ಜೊತೆಗೆ ಜನರು ಹಾಗೂ ಮಕ್ಕಳು ಇರುತ್ತಿರಲಿಲ್ಲ ಎನ್ನುವುದು ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಆರೋಪಿಯ ಮಾನಸಿಕ ಸ್ಥಿತಿಯ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ವೇಳೆ ಕೇಳಿದ್ದರಿಂದ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಅದೆ.

23-01-2026

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಸಂಚಾರಿ ನ್ಯಾಯಾಲಯ, ಹುನಗುಂದ.